ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಮಂಗಳವಾರ, ದಿನಾಂಕ: 2ನೇ ಫೆಬ್ರುವರಿ, 2021

ಸಾರ್ವಜನಿಕ ಉದ್ದಿಮೆಗಳ C.S.R. ಅನುದಾನದ ಬಗ್ಗೆ

ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

178(218) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳೆಷ್ಟು ; ಅವು ಯಾವುವು; ಅವುಗಳನ್ನು ನಿಯಂತ್ರಿಸುವ ಆಡಳಿತ ಇಲಾಖೆಗಳಾವುವು ; (ವಿವರವಾಗಿ ಆಡಳಿತ ಇಲಾಖಾವಾರು ಮಾಹಿತಿ ನೀಡುವುದು)

(ಆ) Corporate Social Responsibility Fund ಅಂದರೇನು; ಇದು ಯಾವ ಉದ್ಯಮಗಳಿಗೆ ಅನ್ವಯಿಸುತ್ತದೆ ಇದರ ಸಂಬಂಧ ಇರುವ ಮಾರ್ಗಸೂಚಿಗಳೇನು ; (ವಿವರವಾದ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಸಾರ್ವಜನಿಕ ಉದ್ದಿಮೆಗಳು Corporate Social Responsibility Fund ನಿಧಿಯಡಿ ಎಷ್ಟು ಹಣವನ್ನು ಕ್ರೋಢೀಕರಿಸಿವೆ ; (ವರ್ಷವಾರು, ಉದ್ದಿಮೆವಾರು ಮಾಹಿತಿ ನೀಡುವುದು)

(ಈ) ಈ ಅನುದಾನದಲ್ಲಿ ಸದರಿ ಉದ್ದಿಮೆಗಳು ಕಳೆದ 3 ವರ್ಷಗಳಿಂದ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣವನ್ನು ಯಾವ ಏಜೆನ್ಸಿ ಮೂಲಕ ಬಿಡುಗಡೆ ಮಾಡಿದೆ ; (ವರ್ಷವಾರು, ಉದ್ದಿಮೆವಾರು, ಏಜೆನ್ಸಿವಾರು, ಕಾಮಗಾರಿ ವಿವರಗಳೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಉ) ಈ ಅನುದಾನವನ್ನು ಯಾವ ಕಾಮಗಾರಿಗಳಿಗೆ ವಿನಿಯೋಗಿಸಬಹುದಾಗಿದೆ ; ಇದರ ಸಂಬಂಧ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳೇನು ?